ಚೌಕಶಿ ಮಾಡಿಲ್ಲ ಅನಸ್ತದ. ಅಂವಾ ಹುಡುಗ ಹಲ್ಕಟ್ ಇದ್ದಾನ. ಹಿಂಗ ಎಷ್ಟೋ ಹೆಣಮಕ್ಕಳ ಜೀವನಾ ಹಾಳು ಮಾಡ್ಯಾನ. ನೌಕರಿ ಸೈತ ಪರ್ಮನೆಂಟಿಲ್ಲಾ..." ಎಂಬೆಲ್ಲ ವಿಚಾರ ತಿಳಿಸಿದರು. ಕೇಳಿ ದಿಗ್ಮೂಢಳಾಗಿ ತಲ್ಲಣಿಸಿದೆ. ಮೌಶಿ, "ಇರ್ಲಿ ಬಾಳಾ. ನೀ ಮದ್ಲ ಊಟಾ ಮಾಡು. ಆಮ್ಯಾಲೆ ಏನ ಮಾಡೋದು ನೋಡೋಣಂತ" ಎಂದು ತಾಟು ಹಾಕಿದರು. ಸೇರದಿದ್ದರೂ ನಾಲ್ಕು ತುತ್ತು ಉಂಡ ಶಾಸ್ತ್ರ ಮಾಡಿದೆ. ನಾಲ್ಕು ದಿನ ಅಲ್ಲೇ ಕಳೆದೆ. ನಕಲಿ ಆಭರಣಗಳನ್ನು ನೋಡಿಯಾದರೂ ತಿರುಗಿ ಬರಬಹುದು. ಹೊಡೆದರೂ ಪರವಾಗಿಲ್ಲ. 'ಯಾಕ ಹಿಂಗ ಮಾಡಿದ್ರಿ?' ಎಂದು ಕೇಳಬಹುದು. ಮತ್ತೆಲ್ಲೂ ಹೋಗದಂತೆ ಬಂಧಿಸಬಹುದೆ? ನೂರಾರು ಆಲೋಚನೆಗಳು. ಕಾಕಾ ತಾವೇ ಹೋಗಿ ನನ್ನ ಸೀರೆ, ವಸ್ತ್ರಗಳನ್ನು ತೆಗೆದುಕೊಂಡು ಬಂದರು. ಜೊತೆಗೆ, ಅವನು ತಿರುಗಿ ಬಂದಿಲ್ಲವೆಂಬ ಕೆಂಡದಂಥ ಸತ್ಯ ನನ್ನನ್ನು ಸುಡುತ್ತಿತ್ತು. 'ಸಂತಿ ಬಸ್ತವಾಡಕ್ಕೆ ಹೋಗಿ ಇದ್ದುಬಿಡಲೆ? ಬಂದಾಗ ಬರಲಿ' ಎನಿಸಿತು. ಆದರೆ, ಅವರು ಪ್ರೀತಿಯಿಂದ ಇಟ್ಟುಕೊಳ್ಳುವ ಸಂಭವ ಕಡಿಮೆ. "ಮದ್ಲ ನೀ ನಿನ್ನ ತವರಮನಿಗೆ ಹೋಗು. ಅವರ ನಿನ್ನ ಅತ್ತಿಮನಿಗೆ ಕರಕೊಂಡು ಹೋಗ್ತಾರ" ಎಂದು ಜೀವಕ್ಕ ಧೈರ್ಯ ತುಂಬಿದಳು. ಅಲ್ಲದೇ ನೆಂಟರ ಹುಡುಗನನ್ನು ಜೊತೆ ಮಾಡಿ ಕಳಿಸಿಕೊಟ್ಟಳು.

ನಾನೊಬ್ಬಳೇ ಚೀಲ ಹಿಡಿದು ಮನೆಯೊಳಗೆ ಕಾಲಿಟ್ಟಾಗ ಎಲ್ಲರೂ ತಣ್ಣಗಾಗಿದ್ದರು. ಅದೂ ಹೋದ ಹದಿನೈದು ದಿನಕ್ಕೇ... "ಯಾಕ... ಏನಾತು?" ಎಂದು ಅವ್ವ, ಅಪ್ಪ ಕೇಳಿದಾಗ ಭೋರೆಂದು ಅಳುತ್ತ ವಿಷಯ ತಿಳಿಸಿದೆ. ಮನೆಯವರೆಲ್ಲ ಹೌಹಾರಿದರು. ಅಪ್ಪ ರೌದ್ರಾವತಾರ ತಾಳಿದ. "ಅವರಪ್ಪನ ಕುತಿಗಿ ಹಿಡಿತೇನಿ" ಎಂದ. ದೊಡ್ಡಣ್ಣ ಹಲ್ಲು ಕಡಿಯುತ್ತ, "ಅಂವನ್ನ ಒಂದ ಕೈ ನೋಡಕೋತೇನಿ" ಎಂದ. ಅವ್ವ, ರಮಾ ವೈನಿ ಬಾಯಿಗೆ ಸೆರಗು ಮುಚ್ಚಿಕೊಂಡು ಅತ್ತರು. ಕೇಶಣ್ಣ ದಂಗು ಬಡಿದು ಕೂತಿದ್ದ. ರಾಧಾ ವೈನಿ, "ಕಪ್ಪು ಕಲೆಗತೆ ಖೊಟ್ಟಿ ನಶೀಬ" ಎಂದು ಕುಟುಕಿದ್ದರು. ಅಣ್ಣಂದಿರು ಸಂತಿಬಸ್ತವಾಡಕ್ಕೆ ಹೋಗಿ ಜಗಳವಾಡಲು ಸಿದ್ಧರಾದರು. ಅದರಿಂದ ಪ್ರಯೋಜನವಿಲ್ಲವೆಂದು ನನಗೆ ಗೊತ್ತು. ಮೂಲೆಗುಂಪಾದ ಮಾವ, ಆತ್ಮೀಯತೆ ಇಲ್ಲದ ಅಣ್ಣಂದಿರ ಜೊತೆ ಜಗಳವಾಡಿದರೆ ಸಂಬಂಧ ಕಡಿಯುತ್ತದೆ. ಆಗ ಅವ್ವನೇ ಸುಧಾರಿಸುತ್ತ, "ಹಂಗ ಜಗಳ್ಯಾಡಿದರ ಅಕಿಗೆ ಅವರ ಮನಿ ಬಾಗಲ ಕಾಯಮ ಮುಚ್ಚಿ ಹೋಗತದ. ಅದರ ಬದ್ಲಿ ಶಾಂತಾಗಿ ಹೇಳ್ರಿ" ಎಂದು ಉಪಾಯ ಹೇಳಿದಳು. ಮಧ್ಯಸ್ತಿಕೆ ವಹಿಸಿದವರ ಮೂಲಕ, "ಹಿಂಗೇನೋ ತಪ್ಪು ಆಗೇದ. ಅದಕ್ಕ ಅಳಿಯಂದ್ರನ್ನ ತಿರುಗಿ ಕರಸ್ರಿ. ಮಗಾ, ಸೊಸಿನ್ನ ಮನ್ಯಾಗ ಇಟಗೋರಿ" ಎಂಬ ಸಂದೇಶ ಕಳುಹಿಸಲಾಯಿತು. ಅಲ್ಲಿಂದ, "ಅವನ ನೌಕರಿ ಬಗ್ಗೆ ನಮಗ ಹೆಚ್ಚಿಗೇನೂ ಗೊತ್ತಿಲ್ಲ. ಅಷ್ಟ ಅಲ್ಲ, ಅವನ ಬಗ್ಗೆನೂ ಗೊತ್ತಿಲ್ಲ. ಎಲ್ಲಿದ್ದಾನಂತೂ ಗೊತ್ತಿಲ್ಲ. ತಿರುಗಿ ಬಂದರ ನಿಮ್ಮ ಮನಿಗೇ ಕಳಸ್ತೇವಿ" ಎಂಬ ಮೊಗಂ ಉತ್ತರ. ಅಪ್ಪ ಕೆಂಡಾಮಂಡಲವಾಗಿ ಉರಿದ. "ಜಗಳ್ಯಾಡಿ ಪರಿಹಾರ ಕೊಡಂದ್ರ ಎಷ್ಟ ಕೊಟ್ಟಾರು? ಇರೋದ ನೂರೆಕರೆ. ಅದರಾಗ ಮೂರು ಪಾಲು. ಬ್ಯಾಡಾ... ಬೇಕಾಗಿಲ್ಲ. ಅದರಕಿಂತಾ ಹೆಚ್ಚು ನಾನ ನನ್ನ ಮಗಳಿಗೆ ಬರದಿಡತೇನಿ" ಎಂದು ಅಬ್ಬರಿಸಿದ. ಅಲ್ಲಿಗೆ ನನ್ನ ಸಂಸಾರದ ಕತೆ ಮುಗಿದಿತ್ತು. "ರುಕ್ಕೂನ ಕಥಿ ಹಿಂಗಾಗತಂತ..." ಎಂದು ಆಡಿಕೊಳ್ಳುವವರ ಬಾಯಿಗೆ ಆಹಾರವಾಗಿದ್ದೆ. "ಪಾಪ..." ಎಂದವರ ಜೊತೆಗೆ, "ಅವರಪ್ಪಗ ದೇಶಪಾಂಡೆತನದ ಧಿಮಾಕು ಭಾಳ ಇತ್ತು. ಬೊರೊಬ್ಬರಾತು" ಎಂದವರೂ ಇದ್ದರು.

ಆದರೆ, ಪ್ರಕರಣ ಮುಕ್ತಾಯವಾಗಲಿಲ್ಲ. ದೊಡ್ಡಣ್ಣ, "ಯಾರು ವರನ ಬಗ್ಗೆ ಚೌಕಶಿ ಮಾಡಿದ್ದು?" ಎಂದು ಕೆಂಗಣ್ಣಿನಿಂದಲೇ ಕೇಳಿದ. ಕೇಶಣ್ಣನ ಮುಖ ಸಪ್ಪಗಾಯಿತು. "ನಾವು ಕೇಳಿದಾಗ ಎಲ್ಲಾ ಭೊಲೊ ಅದ ಅಂದಿದ್ರು" ಎಂದು ರಾಧಾವೈನಿ ಹೇಳಿದರೂ ದೃಷ್ಟಿ ತಪ್ಪಿಸುವ ಮಗನನ್ನು ನೋಡಿ ಸಂಶಯದಿಂದ ಅವ್ವ ಕೇಶಣ್ಣನನ್ನು ದೇವರ ಕೋಣೆಗೆ ಎಳೆದುಕೊಂಡು ಹೋದಳು. "ಖರೇ